## ಕರ್ನಾಟಕ ವಿಧಾನ ಪರಿಷತ್

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1109** |
| **ಸದಸ್ಯರ ಹೆಸರು** | : | **ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | : | **28-12-2022** |
| **ಉತ್ತರಿಸುವ ಸಚಿವರು** | : | **ಮಾನ್ಯ ಕಂದಾಯ ಸಚಿವರು** |

<table>
<tr><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ) ಜಿಲ್ಲಾವಾರು ನೈಸರ್ಗಿಕ ವಿಕೋಪಕ್ಕೆ ಮೀಸಲಿಟ್ಟ ಹಣ ಬಳಕೆಯಾಗಿದೆಯೇ: (ಜಿಲ್ಲಾವಾರು ಕಾರ್ಯಕ್ರಮಗಳ ವಿವರಗಳು ಮತ್ತು ವೆಚ್ಚಗಳನ್ನು ನೀಡುವುದು)</td><td>ಪ್ರಕೃತಿ ವಿಕೋಪದ ಪ್ರಮಾಣಕ್ಕನುಗುಣವಾಗಿ ಪರಿಹಾರ ಕಾರ್ಯಗಳಿಗಾಗಿ ಜಿಲ್ಲೆಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಅನುದಾನ ಬಿಡುಗಡೆಗೊಳಿಸಲಾಗುತ್ತಿದ್ದು, ಜಿಲ್ಲಾವಾರು ಅನುದಾನ ಮೀಸಲಾತಿ ಇರುವುದಿಲ್ಲ.<br>ಪ್ರಸಕ್ತ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ಒಟ್ಟಾರೆ ರೂ.2271.62 ಕೋಟಿಗಳನ್ನು ಬಿಡುಗಡೆಗೊಳಿಸಿದ್ದು, ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.</td></tr>
<tr><td>(ಆ) ಅತೀಯಾದ ಮಳೆಯಿಂದ ಗ್ರಾಮಾಂತರ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ಬಹಳಷ್ಟು ಮನೆಗಳು ಕುಸಿದು ಬಿದ್ದು ಜನರಿಗೆ ವಾಸಿಸಲು ಮನೆಗಳಿಲ್ಲದೆ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಸರ್ಕಾರ ಕೈಗೊಂಡ ಕ್ರಮವೇನು; ಇದನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪ್ರಸ್ತುತ ಸಾಲಿನ ಅತಿವೃಷ್ಟಿ / ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಹಾನಿಯ ಪ್ರಮಾಣದನ್ವಯ ಈ ಕೆಳಕಂಡಂತೆ ಪರಿಹಾರ ನೀಡಲು ಆದೇಶಿಸಲಾಗಿದೆ.
<table>
<tr><th>"ಎ" ವರ್ಗ (75%ಕ್ಕಿಂತ ಹೆಚ್ಚು ಹಾನಿ)</th><th>"ಬಿ" ವರ್ಗ (25% ರಿಂದ 75%ರವರೆಗೆ ಹಾನಿ)</th><th>"ಸಿ" ವರ್ಗ (15% ರಿಂದ 25%ರವರೆಗೆ ಹಾನಿ)</th></tr>
<tr><td>ರೂ.5,00,000/-</td><td>ಬಿ-1 ದುರಸ್ಥಿ ರೂ.3,00,000/-<br>ಬಿ-2 ಪುನರ್ ನಿರ್ಮಾಣ ರೂ.5,00,000/-</td><td>ರೂ.50,000/-</td></tr>
</table>
ಮುಂದುವರೆದು, ಎ ಮತ್ತು ಬಿ ಪ್ರಕರಣಗಳಿಗೆ ಪ್ರಥಮ ಕಂತಿನ ಪರಿಹಾರ ರೂ.95,100/-ಗಳನ್ನು ಜಿಲ್ಲಾಡಳಿತದಿಂದ ನೀಡಲಾಗಿದ್ದು, ಮನೆ ಮಾಲೀಕರು ಮನೆಗಳ ದುರಸ್ಥಿ/ಪುನರ್ ನಿರ್ಮಾಣದ ಹಂತವಾರು ಬಾಕಿ ಪರಿಹಾರವನ್ನು ಜಿಪಿಎಸ್ ಆಧಾರದ ಮೇರೆಗೆ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ತಂತ್ರಾಂಶದ ವತಿಯಿಂದ ನೇರವಾಗಿ ಸಂತ್ರಸ್ಥರ ಬ್ಯಾಂಕ್ ಖಾತೆಗೆ ಜಮೆಯಾಗುವುದು.<br>ಸಿ ವರ್ಗದ ಮನೆಹಾನಿಗೆ ತಲಾ ರೂ.50,000/-ದಂತೆ ಜಿಲ್ಲಾಧಿಕಾರಿಗಳ ಮೂಲಕ ಒಂದೇ ಕಂತಿನಲ್ಲಿ ನೇರ ಸಂತ್ರಸ್ಥರಿಗೆ ಪರಿಹಾರವನ್ನು ಪಾವತಿಸಲಾಗಿದೆ.</td></tr>
<tr><td>(ಇ) ರಾಜ್ಯಾದ್ಯಾಂತ ಕೃಷಿ ಭೂಮಿಯನ್ನು ಕೃಷಿಯೇತರ ಚಟುವಟಿಕೆಗಳಿಗಾಗಿ ಬಳಸಿಕೊಳ್ಳುತ್ತಿದ್ದು, ಮುಂದಿನ ದಿನಗಳಲ್ಲಿ ತೀವ್ರ ಆಹಾರದ ಕೊರತೆ ಉಂಟಾಗುವ ಸಂಭವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಸರ್ಕಾರದ ನಿಲುವೇನು?</td><td>ಕೃಷಿ ಇಲಾಖೆಯು ನೀಡಿರುವ ಮಾಹಿತಿಯನುಸಾರ ಕಳೆದ 3 ವರ್ಷಗಳಲ್ಲಿ ಕೃಷಿ ಆಹಾರ ಧಾನ್ಯಗಳ ಉತ್ಪಾದನೆಯ ವಿವರಗಳು ಈ ಕೆಳಕಂಡಂತಿದೆ :
<table>
<tr><th>ವರ್ಷ</th><th>ವಿಸ್ತೀರ್ಣ (ಲಕ್ಷ ಹೆಕ್ಟೇರ್)</th><th>ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)</th></tr>
<tr><td>2019-20</td><td>77.53</td><td>136.41</td></tr>
<tr><td>2020-21</td><td>83.23</td><td>160.27</td></tr>
<tr><td>2021-22</td><td>81.66</td><td>143.68</td></tr>
</table>
ಆಹಾರ ಕೊರತೆ ಉಂಟಾಗುವ ಸಂಭವವಿರುವುದು ಕಂಡುಬಂದಿರುವುದಿಲ್ಲ.</td></tr>
</table>

*ಕಂಇ 583ಟಿಎನ್‌ಆರ್ 2022*

(ಆರ್. ಅಶೋಕ)
ಕಂದಾಯ ಸಚಿವರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1098 ಅನುಬಂಧ

**2022-23ನೇ ಸಾಲಿನಲ್ಲಿ ಕೋವಿಡ್, ಪ್ರವಾಹ ಪರಿಹಾರ ಹಾಗೂ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳಿಗೆ SDRF ರಡಿ ಬಿಡುಗಡೆ ಮಾಡಲಾದ ಅನುದಾನದ ವಿವರ**

*26-12-2022 ರ ವರೆಗೆ*

| ಕ್ರ. ಸಂ | ಜಿಲ್ಲೆ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) | | | ಒಟ್ಟು |
|---|---|---|---|---|---|
| | | ಕೋವಿಡ್ | ಪ್ರವಾಹ | ಸಾಮರ್ಥ್ಯಾಭಿವೃದ್ಧಿ | |
| **1** | **2** | **3** | **4** | **5** | **6** |
| 1 | ಬಾಗಲಕೋಟೆ | | 600.00 | 20.00 | 620.00 |
| 2 | ಬಳ್ಳಾರಿ | | 1230.00 | 20.00 | 1250.00 |
| 3 | ಬೆಳಗಾವಿ | | 1500.00 | 20.00 | 1520.00 |
| 4 | ಬೆಂಗಳೂರು ಗ್ರಾಮಾಂತರ | | 805.00 | 20.00 | 825.00 |
| 5 | ಬೆಂಗಳೂರು ನಗರ | | 1117.00 | 20.00 | 1137.00 |
| 6 | ಬೀದರ್ | | 910.00 | 20.00 | 930.00 |
| 7 | ಚಾಮರಾಜನಗರ | | 1409.00 | 20.00 | 1429.00 |
| 8 | ಚಿಕ್ಕಬಳ್ಳಾಪುರ | | 1300.00 | 20.00 | 1320.00 |
| 9 | ಚಿಕ್ಕಮಗಳೂರು | | 1986.00 | 20.00 | 2006.00 |
| 10 | ಚಿತ್ರದುರ್ಗ | | 972.00 | 20.00 | 992.00 |
| 11 | ದಕ್ಷಿಣ ಕನ್ನಡ | | 3563.00 | 20.00 | 3583.00 |
| 12 | ದಾವಣಗೆರೆ | | 4294.00 | 20.00 | 4314.00 |
| 13 | ಧಾರವಾಡ | | 954.00 | 20.00 | 974.00 |
| 14 | ಗದಗ | | 927.00 | 20.00 | 947.00 |
| 15 | ಹಾಸನ | | 2793.00 | 20.00 | 2813.00 |
| 16 | ಹಾವೇರಿ | | 8835.00 | 20.00 | 8855.00 |
| 17 | ಕಲಬುರಗಿ | | 600.00 | 20.00 | 620.00 |
| 18 | ಕೊಡಗು | | 361.00 | 20.00 | 381.00 |
| 19 | ಕೋಲಾರ | | 900.00 | 20.00 | 920.00 |
| 20 | ಕೊಪ್ಪಳ | | 1300.00 | 20.00 | 1320.00 |
| 21 | ಮಂಡ್ಯ | | 1400.00 | 20.00 | 1420.00 |
| 22 | ಮೈಸೂರು | | 4394.00 | 20.00 | 4414.00 |
| 23 | ರಾಯಚೂರು | | 1351.00 | 20.00 | 1371.00 |
| 24 | ರಾಮನಗರ | | 1296.00 | 20.00 | 1316.00 |
| 25 | ಶಿವಮೊಗ್ಗ | | 3337.00 | 20.00 | 3357.00 |
| 26 | ತುಮಕೂರು | | 2192.00 | 20.00 | 2212.00 |
| 27 | ಉಡುಪಿ | | 3473.00 | 20.00 | 3493.00 |
| 28 | ಉತ್ತರ ಕನ್ನಡ | | 3080.00 | 20.00 | 3100.00 |
| 29 | ವಿಜಯಪುರ | | 864.00 | 20.00 | 884.00 |
| 30 | ವಿಜಯನಗರ | | 700.00 | 20.00 | 720.00 |
| 31 | ಯಾದಗಿರಿ | | 700.00 | 20.00 | 720.00 |
| 32 | ಬಿಬಿಎಂಪಿ | | 1050.00 | | 1050.00 |
| | **ಒಟ್ಟು (ಅ)** | **0.00** | **60193.00** | **620.00** | **60813.00** |
| 1 | ಅಗ್ನಿಶಾಮಕ ಇಲಾಖೆ (Capacity Building) | 0.00 | -- | 1062.00 | 1062.00 |
| 2 | ಸಾಮಾಜಿಕ ಭದ್ರತೆ & ಪಿಂಚಣಿಗಳು | 9400.00 | -- | -- | 9400.00 |
| 3 | ರಾಜೀವ್ ಗಾಂಧಿ ವಸತಿ ನಿಗಮ (ಮನೆ ಹಾನಿ ಪರಿಹಾರ) | -- | 30000.00 | -- | 30000.00 |
| 4 | ಬೆಳೆ ಪರಿಹಾರ (ಬ್ಯಾಂಕ್ ಖಾತೆ) | -- | 125800.00 | -- | 125800.00 |
| 5 | ಕೆ.ಎಸ್.ಎನ್.ಡಿ.ಎಂ.ಸಿ (ಸಾಮರ್ಥ್ಯಾಭಿವೃದ್ಧಿ ನಿಧಿ) | -- | | 87.50 | 87.50 |
| | **ಒಟ್ಟು (ಆ)** | **9400.00** | **155800.00** | **1149.50** | **166349.50** |
| | **Grand Total (ಅ+ಆ)** | **9400.00** | **215993.00** | **1769.50** | **227162.50** |